# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352–229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–101/2017–18/2471 ದಿನಾಂಕ:3–11–2017

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ: 24–10–2017 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ **"ಅಕ್ಕಮಹಾದೇವಿ ಸಂಶೋಧನಾ, ಕೌಶಲ್ಯ ಅಭಿವೃದ್ಧಿ ಹಾಗೂ ವಿಸ್ತರಣಾ ಕೇಂದ್ರ ಉಡುತಡಿ(ಶಿವಮೊಗ್ಗಾ ಜಿಲ್ಲೆ ಶಿಕಾರಿಪುರ)"**ಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 24–10–2017 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ **"ಅಕ್ಕಮಹಾದೇವಿ ಸಂಶೋಧನಾ, ಕೌಶಲ್ಯ ಅಭಿವೃದ್ಧಿ ಹಾಗೂ ವಿಸ್ತರಣಾ ಕೇಂದ್ರ ಉಡುತಡಿ(ಶಿವಮೊಗ್ಗಾ ಜಿಲ್ಲೆ ಶಿಕಾರಿಪುರ)"**ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ**
**ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 12 ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4-11-2016 | 3-11-2017 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಶ್ರೀ ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೇರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5-9-2017 | 4-9-2018 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4-10-2017 | |
| 23. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 4-10-2017 | |

# ದಿನಾಂಕ:24–10–2017 ರಂದು ಮುಂಜಾನೆ 11:00ಗಂಟೆಗೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, "ಅಕ್ಕಮಹಾದೇವಿ ಸಂಶೋಧನಾ, ಕೌಶಲ್ಯ ಅಭಿವೃದ್ಧಿ ಹಾಗೂ ವಿಸ್ತರಣಾ ಕೇಂದ್ರ ಉಡುತಡಿ" ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಶ್ರೀ.ಡಿ.ಎಂ.ನಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 3. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 4. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 5. | ಶ್ರೀ ನಾನಾಗೌಡ ಹಿಪ್ಪರಗಿ | : ಸದಸ್ಯರು |
| 6. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 7. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 8. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 9. | ಡಾ.ಫರ್‌ಜಾನಾ ಎಂ | : ಸದಸ್ಯರು |
| 10. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 11. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 12. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 13. | ಪ್ರೊ.ಎಸ್.ಬಿ.ಕಾಮಶೆಟ್ಟಿ | : ಸದಸ್ಯರು |
| 14. | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 15. | ಪ್ರೊ.ಎಲ್.ಆರ್.ನಾಯಕ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ–ವಿಜ್ಞಾನ ನಿಕಾಯ | : ಸದಸ್ಯರು |
| 2. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 3. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 4. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 8. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಪ್ರೊ.ಎಲ್.ಆರ್.ನಾಯಕ ಕುಲಸಚಿವರು, ಪ್ರೊ.ಎಸ್.ಬಿ.ಮಾಡಗಿ ಕುಲಸಚಿವರು(ಮೌ), ಹಾಗೂ ಕರ್ನಾಟಕ ರಾಜ್ಯ ಅಧಿನಿಯಮ 2000, ಪ್ರಕರಣ 28 (1) (ಹೆಚ್)ರಡಿಯಲ್ಲಿ ನಾಮನಿರ್ದೇಶಿತರಾದ ಪ್ರೊ.ಎಸ್.ಬಿ.ಕಾಮಶೆಟ್ಟಿ, ಪ್ರಾಧ್ಯಾಪಕರು ಎಂ.ಬಿ.ಎ ಅಧ್ಯಯನ ವಿಭಾಗ ಅವರುಗಳನ್ನು ಸ್ವಾಗತಿಸಿ ಎಲ್ಲ ಸದಸ್ಯರನ್ನು ಪರಿಚಯಿಸಿದರು. ಮುಂದುವರಿದು ಸಭೆಯಲ್ಲಿರುವ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

## ದಿನಾಂಕ:24–10–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**ದಿನಾಂಕ: 06–09–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.**

**ನಿರ್ಣಯ:–**

1. **ಪುರವಣಿ ಸಂಖ್ಯೆ: 03 ರಲ್ಲಿ ರಚಿಸಿದ ಸಮಿತಿಯ ಸದಸ್ಯ ಸಂಚಾಲಕರನ್ನು ಉಪ–ಕುಲಸಚಿವರು, ಆಡಳಿತ ವಿಭಾಗ ಇವರನ್ನು ಮಾಡಲಾಯಿತು.**
2. **ದಿನಾಂಕ:06–09–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

**ದಿನಾಂಕ: 12–07–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.**

**ನಿರ್ಣಯ:–**

**ದಿನಾಂಕ: 12–7–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

### ದಿನಾಂಕ: 06–09–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯ

## *ಸಿಂಡಿಕೇಟ್ ಐಟಂ ಸಂಖ್ಯೆ : 01*

**ವಿಷಯ:–**ದಿನಾಂಕ:14–8–2017ರಂದು ಜರುಗಿದ 48ನೇ ಹಣಕಾಸು ಸಮಿತಿ ಸಭೆಯ ನಡವಳಿಗಳು ಹಾಗೂ 2016–17ನೇ ವಾರ್ಷಿಕ ಲೆಕ್ಕಪತ್ರವನ್ನು ದಿನಾಂಕ:06–09–2017 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ **ಮುಂದೂಡಲಾಯಿತು**. ಈಗ ಪುನ: ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:–**ದಿನಾಂಕ:14–8–2017ರಂದು ಜರುಗಿದ 48ನೇ ಹಣಕಾಸು ಸಮಿತಿ ಸಭೆಯ ನಡವಳಿಗಳು ಹಾಗೂ 2016–17ನೇ ವಾರ್ಷಿಕ ಲೆಕ್ಕಪತ್ರವನ್ನು ಪತ್ರಿಕೆಯನ್ನು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 02*

**ವಿಷಯ:–** ದಿನಾಂಕ:12–07–2017ರಂದು ಜರುಗಿದ Malpractice Consideration Committee (Students)ಸಭೆಯ ನಡವಳಿಗಳಲ್ಲಿ ಕೆಲವೊಂದು ನ್ಯೂನತೆ ಕಂಡು ಬಂದಿದ್ದು ಅದನ್ನು ಸರಿಪಡಿಸಲು ಪರೀಕ್ಷಾ ವಿಭಾಗಕ್ಕೆ ತಿಳಿಸಿದ್ದು. ಸದರಿ ಸಭೆಯ ನಡವಳಿಗಳನ್ನು ಸರಿಪಡಿಸಿ ಪುನ: ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:–**ದಿನಾಂಕ:12–7–2017ರಂದು ಜರುಗಿದ Malpractice Consideration Committee (Students) ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

## ಹೊಸ ವಿಷಯಗಳು:

### *ಸಿಂಡಿಕೇಟ್ ಐಟಂ ಸಂಖ್ಯೆ : 03*

**ವಿಷಯ:** 2018–19 ನೇ ಶೈಕ್ಷಣಿಕ ಸಾಲಿಗೆ ಹೊಸ ಕಾಲೇಜ/ಕೋರ್ಸ– ವಿಷಯ /ಶಾಶ್ವತ/ಶಾಶ್ವತ ನವೀಕರಣ/ಮುಂದುವರಿಕೆ ಹಾಗೂ ಸ್ನಾತಕೋತ್ತರ ಕೋರ್ಸಿಗೆ ಸಂಯೋಜನೆ ಅಧಿಸೂಚನೆ ಹೊರಡಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ 2018–19 ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಿ ಸಂಯೋಜನಾ ಅಧಿಸೂಚನೆ ಹೊರಡಿಸಲಾಗಿದೆ. ಆದ್ದರಿಂದ ಸಂಯೋಜನೆ ಶುಲ್ಕವನ್ನು ನಿಗದಿಪಡಿಸುವಕುರಿತು ದಿನಾಂಕ : 09–09–2016 ರಂದು ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ಐಟಂ ನಂ. 06/93 ರನ್ವಯ ಸದರಿ 2017–18 ನೇ ಶೈಕ್ಷಣಿಕ ಸಾಲಿನೆ ಶೇಕಡಾ 10% ರಷ್ಟು ಹೆಚ್ಚಿಸಿ ಮುಂದಿನ ಸಮ ಸಂಖ್ಯೆ ಮಾಡಿಕೊಳ್ಳುವದೊಂದಿಗೆ ಪ್ರಸ್ತಾವನೆ ಒಪ್ಪಿಕೊಳ್ಳಲಾಗಿತ್ತು, ಅದರಂತೆ 2018–19 ನೇ ಸಾಲಿಗೆ ಸಂಯೋಜನೆ ಶುಲ್ಕದಲ್ಲಿ ಶೇಕಡಾ 10% ರಷ್ಟು ಹೆಚ್ಚಿಸಲಾಗಿದೆ. ಈ ವಿಷಯ ಘಟ್ಟನೋತ್ತರ ಆದೇಶಕ್ಕಾಗಿ ಸಿಂಡಿಕೇಟ ಸಭೆ ಮಂಡಿಸಲಾಗಿದೆ.

ನಿರ್ಣಯ:– **2018–19ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಶುಲ್ಕದಲ್ಲಿ ಶೇಕಡಾ 10% ರಷ್ಟು ಹೆಚ್ಚಿಸಲಾಗಿದ್ದನ್ನು ಅನುಮೋದಿಸಲಾಯಿತು.**

### *ಸಿಂಡಿಕೇಟ್ ಐಟಂ ಸಂಖ್ಯೆ : 04*

**ವಿಷಯ:** ಸಂಯೋಜನೆ ರದ್ದುಪಡಿಸಿ ಭದ್ರತಾ ಠೇವಣಿ ಹಣ ಮರಳಿಸುವ ಕುರಿತು.

**ಉಲ್ಲೇಖ** : ಕಾಲೇಜಿನ ಪತ್ರ ಸಂಖ್ಯೆ: IQRAWDC/2017 ದಿನಾಂಕ: 14–09–2017.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು/ಕಾರ್ಯದರ್ಶಿ ಇಖ್ರಾ ಎಜುಕೇಶನ್ ಟ್ರಸ್ಟಿನ ಇಖ್ರಾ ಮಹಿಳಾ ಪದವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಶಿರಸಿ ಜಿ:ಕಾರವಾರ ಇವರು ತಿಳಿಸಿದಂತೆ ವಿದ್ಯಾರ್ಥಿನಿಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು ಹಾಗೂ ಮಹಾವಿದ್ಯಾಲಯ ನಡೆಸಲು ತಗಲುವ ಆರ್ಥಿಕ ವೆಚ್ಚವನ್ನು ಭರಿಸಲು ಆಗುವದಿಲ್ಲ. ಆದ್ದರಿಂದ ಸಂಯೋಜನೆ ರದ್ದುಪಡಿಸಿ ಭದ್ರತಾ ಠೇವಣಿ ಹಣ ಮರಳಿಸಲು ವಿನಂತಿಸಿರುತ್ತಾರೆ. ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

ನಿರ್ಣಯ:– **ಇಖ್ರಾ ಎಜುಕೇಶನ್ ಟ್ರಸ್ಟಿನ ಇಖ್ರಾ ಮಹಿಳಾ ಪದವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಶಿರಸಿ ಇವರ ಸಂಯೋಜನೆ ರದ್ದುಪಡಿಸಿ ಭದ್ರತಾ ಠೇವಣಿ ಹಣ ಮರಳಿಸಲು ಅನುಮೋದಿಸಲಾಯಿತು.**

### *ಸಿಂಡಿಕೇಟ್ ಐಟಂ ಸಂಖ್ಯೆ : 05*

**ವಿಷಯ:** ಎಂ.ಫಿಲ್ ಮತ್ತು ಪಿಎಚ್.ಡಿ ವ್ಯಾಸಂಗ ಮಾಡುತ್ತಿರುವ ಸಂಶೋಧನಾ ವಿದ್ಯಾರ್ಥಿನಿಯರ ಶುಲ್ಕವನ್ನು ನಿಗದಿಪಡಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಎಂ.ಫಿಲ್ ಮತ್ತು ಪಿಎಚ್.ಡಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಶೀರ್ಷಿಕೆ ಬದಲಾವಣೆ, ಮಾರ್ಗದರ್ಶಕರ ಬದಲಾವಣೆ ಮತ್ತು ಪೂರ್ಣಕಾಲಿಕ ಪಿಎಚ್.ಡಿ

ಇಂದ ಅರೆಕಾಲಿಕೆಗಾಗಿ, ಅರೆಕಾಲಿಕೆ ಇಂದ ಪೂರ್ಣಕಾಲಿಕೆಗಾಗಿ ಅರ್ಜಿ ಸಲ್ಲಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಈಗ ಕ್ರಮಜರುಗಿಸಲಾಗುತ್ತಿದೆ. ಹಾಗೂ ಯಾವುದೇ ಶುಲ್ಕ ವಿಧಿಸಲಾಗುತ್ತಿಲ್ಲ. ಆದರೆ ಈ ಸೇವೆಯನ್ನು ನೀಡುವಲ್ಲಿ ವಿಶ್ವವಿದ್ಯಾನಿಲಯದ ಸಂಪನ್ಮೂಲಗಳ ವೆಚ್ಚವಾಗುತ್ತಿದ್ದು, ಇದಕ್ಕಾಗಿ ಶುಲ್ಕವನ್ನು ನಿಗದಿಮಾಡಬೇಕಾಗಿದೆ. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ | ವಿವರ | ಶುಲ್ಕ |
|---|---|---|
| 1. | ಶೀರ್ಷಿಕೆ ಬದಲಾವಣೆ (Change of Topic) | 2000/– |
| 2. | ಪೂರ್ಣಕಾಲಿಕ ಪಿಎಚ್.ಡಿ/ಎಂ.ಫಿಲ್ ಇಂದ ಅರೆಕಾಲಿಕೆಗಾಗಿ, | 2000/– |
| 3. | ಅರೆಕಾಲಿಕೆ ಪಿಎಚ್.ಡಿ/ಎಂ.ಫಿಲ್ ಇಂದ ಪೂರ್ಣಕಾಲಿಕೆಗಾಗಿ | 2000/– |

**ನಿರ್ಣಯ:– ಎಂ.ಫಿಲ್ ಮತ್ತು ಪಿಎಚ್.ಡಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಶೀರ್ಷಿಕೆ ಬದಲಾವಣೆ, ಮಾರ್ಗದರ್ಶಕರ ಬದಲಾವಣೆ ಮತ್ತು ಪೂರ್ಣಕಾಲಿಕ ಪಿಎಚ್.ಡಿ ಇಂದ ಅರೆಕಾಲಿಕೆಗಾಗಿ, ಅರೆಕಾಲಿಕೆ ಇಂದ ಪೂರ್ಣಕಾಲಿಕೆಗಾಗಿ ಅರ್ಜಿ ಸಲ್ಲಿಸಲು ತಲಾ ರೂ.1,000/– ಶುಲ್ಕವನ್ನು ನಿಗದಿಪಡಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 06*

**ವಿಷಯ:** ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ಪ್ರೊ.ವಿ.ವಿ.ಮಳಗಿ ಅವರನ್ನು ನೇಮಕ ಮಾಡಿರುವ ಕುರಿತು.

**ಉಲ್ಲೇಖ:**–1.ಕಛೇರಿ ಆದೇಶ ಸಂಖ್ಯೆ:ಅಮವಿವಿ/ಆಡಳಿತ–1/ಸೇನಿ/2017–18/1367 ದಿ:31-7-2017
**2**.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 104 ಎಂವಿವಿ 2017 ದಿ:3–10–2017
3.ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ–2/2017–18/2217 ದಿ:9–10–2017

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ:2ರ ಸರ್ಕಾರದ ಅಧಿಸೂಚನೆಯನ್ವಯ ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌಲ್ಯಮಾಪನ) ಹುದ್ದೆಯು ದಿನಾಂಕ:6–10–2017ರಂದು ಮುಕ್ತಾಯವಾಗಿದ್ದು, ಸದರಿಯವರು ಶಿಕ್ಷಣ ವಿಭಾಗದ ಪ್ರಾಧಾಪಕರ ಹುದ್ದೆಗೆ ಹಾಜರಾಗಿರುವರು. ಈ ಹಿನ್ನೆಲೆಯಲ್ಲಿ ದಿನಾಂಕ:6–10–2017ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರ ಸಂಪೂರ್ಣ ಚಾರ್ಜನ್ನು ಪ್ರೊ.ವಿ.ವಿ.ಮಳಗಿ, ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ವಿಭಾಗ ಇವರಿಗೆ ವಹಿಸಿಕೊಡಲಾಗಿದೆ. ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 07*

**ವಿಷಯ:** ವಿಶ್ವವಿದ್ಯಾನಿಲಯದ ಸ್ಥಾನಿಕ ಅಭಿಯಂತರರ ಪ್ರಭಾರ ಹುದ್ದೆಗೆ ಹಾಜರಾದ ಕುರಿತು.

**ಉಲ್ಲೇಖ:**–1.ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 267 ಸೇಎಸು 2017 ದಿ:29–8–2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆ ಪ್ರಕಾರ ಶ್ರೀ ಕೊಲ್ಲಾರಿ ನಾಗರಾಜ, ಸ್ಥಾನಿಕ ಅಭಿಯಂತರರು ಇವರನ್ನು ದಿನಾಂಕ:16–9–2017ರಂದು ಅಪರಾಹ್ನ ವಿಶ್ವವಿದ್ಯಾನಿಲಯದ ಸ್ಥಾನಿಕ ಅಭಿಯಂತರರ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ. ಶ್ರೀ.ಎಸ್.ಸಿ.ಇನಾಮದಾರ್, ಕಾರ್ಯಪಾಲಕ

ಇಂಜನೀಯರ್ ಲೋಕೋಪಯೋಗಿ ವಿಭಾಗ, ವಿಜಯಪುರ ಇವರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರದ ಸ್ಥಾನಿಕ ಅಭಿಯಂತರರ ಪ್ರಭಾರ ಹುದ್ದೆಗೆ ದಿನಾಂಕ:11-10-2017ರಂದು ಸೇವೆಗೆ ಹಾಜರಾಗಿರುತ್ತಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅಹುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 08*

**ವಿಷಯ:** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ/ಶಾಖಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ/ಬ್ಯಾಹಮೂಲ/PWG-34 ಸಿಬ್ಬಂದಿಯವರ ಪ್ರಸ್ತುತ ಹುದ್ದೆ ಮತ್ತು ಹಿಂದಿನ ಹುದ್ದೆ ಹಾಗೂ ವೇತನ ತಾರತಮ್ಯ ಇತರೆ ಸಮಸ್ಯೆ ಕುರಿತು ಸಮಿತಿ ರಚಿಸಿದ್ದು ಸದರಿ ಸಮಿತಿಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ವೇತನ ತಾರತಮ್ಯ ಇತರೆ ಸಮಸ್ಯೆ ಕುರಿತು ರಚಿಸಿದ ಸಮಿತಿಯ ನಡವಳಿಗಳನ್ನು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 09*

**ವಿಷಯ:-** ದಿನಾಂಕ: 7-9-2017ರಂದು ಜರುಗಿದ Malpractice Consideration Committee (Employees) ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-ದಿನಾಂಕ:7-9-2017ರಂದು ಜರುಗಿದ Malpractice Consideration Committee (Employees) ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 10*

**ವಿಷಯ:** Exam Automation Software Tender ಕುರಿತು.

**ಉಲ್ಲೇಖ:**1) ದಿನಾಂಕ:14-03-2017 ರಂದು ಜರುಗಿದ ಸಿಂಡಿಕೇಟ ಸಭೆಯ ನಡಾವಳಿಗಳು.
2) ದಿನಾಂಕ:06-09-2017 ರಂದು ಜರುಗಿದ ಸಿಂಡಿಕೇಟ ಸಭೆಯ ನಡಾವಳಿಗಳು.
3) ಅಲ್ಪಾವಧಿ ಟೆಂಡರ ಅಧಿಸೂಚನೆ ಸಂಖ್ಯೆ: AWUB/EB/Examsoftware/2017-18/3540. ದಿನಾಂಕ:08-09-2017.
4) ಟೆಕ್ನಿಕಲ್ ಬಿಡ್ ದಿನಾಂಕ:06-10-2017.
5) ಫೈನಾನ್ಸಿಯಲ್ ಬಿಡ್ ದಿನಾಂಕ: 07-10-2017.
6) ದಿನಾಂಕ:11-10-2017 ರಂದು ಜರುಗಿದ ನೆಗೋಷಿಯೇಶನ್ ಸಭೆಯ ನಡಾವಳಿಗಳು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1) ಮತ್ತು (2)ರ ಸಿಂಡಿಕೇಟ ಸಭೆಗಳ ನಿರ್ಣಯದಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪರೀಕ್ಷಾ ಕೆಲಸಗಳಿಗಾಗಿ Exam Automa-

tion Software ಕುರಿತು ಅಲ್ಪಾವಧಿ ಟೆಂಡರ ಉಲ್ಲೇಖಿತ(3)ರ ಅಧಿಸೂಚನೆಯ ಮೂಲಕ ಕರೆಯಲಾಗಿತ್ತು. ಇದಕ್ಕೆ ಈ ಕೆಳಕಂಡ ಬಿಡ್ಡರ್ಸ ಟೆಂಡರ ಸಲ್ಲಿಸಿರುತ್ತಾರೆ.

1. H.N Ramesh (Logisys)
2. Manish Mohta (Learning Spiral Pvt. Ltd.)
3. Perdoor Vaman Mallya (Manipal Technologies Ltd.)

ದಿನಾಂಕ:06–10–2017 ರಂದು ಟೆಕ್ನಿಕಲ್ ಬಿಡ್ ತೆರೆಯಲಾಗಿದ್ದು, ಇದರಲ್ಲಿ H.N Ramesh (Logisys) ಮತ್ತು Perdoor Vaman Mallya (Manipal Technologies Ltd.) ಎರಡು ಬಿಡ್ಡರ ಅರ್ಹರಾಗಿರುತ್ತಾರೆ. ಹಾಗೂ ದಿನಾಂಕ: 07–10–2017 ರಂದು ಫೈನಾನ್ಸಿಯಲ್ ಬಿಡ್ ತರೆಯಲಾಗಿದ್ದು ಇದರಲ್ಲಿ H.N Ramesh (Logisys) ಇವರು 92.97 ಅಂಕಗಳು ಹೊಂದಿ ಮೊದಲನೆ ಸ್ಥಾನ ಪಡೆದಿರುತ್ತಾರೆ. ನಂತರ ದಿನಾಂಕ:11–10–2017 ರಂದು ನೆಗೋಷಿಯೇಶನ್‌ಕ್ಕಾಗಿ ಸಭೆಯನ್ನು ಜರುಗಿಸಲಾಗಿದ್ದು, ಸದರಿ ಸಭೆಯ ನಡಾವಳಿಗಳಲ್ಲಿ 1) ಪರೀಕ್ಷಾ ಕಾರ್ಯ ಪ್ರತಿ ವಿದ್ಯಾರ್ಥಿಗೆ ರೂ.190/– ರಿಂದ ಇಳಿಸಿ ರೂ.148/– ರಂತೆ ನಿಗದಿಪಡಿಸಲಾಗಿದೆ. 2) Duplicate Marks Card/re-computation result due to RV/RT/CV etc.,/Printing of Convocation Certificate ನ್ನು ಪ್ರತಿ ವಿದ್ಯಾರ್ಥಿಗೆ ರೂ. 50/– ರಿಂದ ಇಳಿಸಿ ರೂ.40/– ರಂತೆ ಹಾಗೂ 3) ಪ್ರತಿ ವರ್ಷ ಹೆಚ್ಚುವರಿ ಬಿಲ್ 10% ಹೆಚ್ಚಿಸಿದನ್ನು ಇಳಿಸಿ 5%ಕ್ಕೆ ನಿಗದಿಪಡಿಸಲಾಗಿದೆ. ಇದಕ್ಕೆ Logisys Bengaluru ಇವರು ಒಪ್ಪಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು ಹಾಗೂ ಪರೀಕ್ಷೆಯ ಫಲಿತಾಂಶದ ಪ್ರತಿಯನ್ನು(Hard Copy) ಎಲ್ಲ ಮಹಿಳಾ ಮಹಾವಿದ್ಯಾಲಯಗಳಿಗೆ ಕಳುಹಿಸಬೇಕೆಂದು ಸೂಚಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :11*

**ವಿಷಯ:–** ದಿನಾಂಕ:24–8–2017 ರಂದು ಜರುಗಿದ ವಸತಿ ನಿಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ವಸತಿ ನಿಲಯದ ಸಲಹಾ ಸಮಿತಿ ಸಭೆಯ ಹದಿಮೂರು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :12*

**ವಿಷಯ:–** ದಿನಾಂಕ:11–08–2017 ರಂದು ಜರುಗಿದ ಕುಂದು ಕೊರತೆಗಳ ಕೋಶದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಕುಂದು ಕೊರತೆಗಳ ಕೋಶದ ಸಲಹಾ ಸಮಿತಿ ಸಭೆಯ ಏಳು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

# ಸಿಂಡಿಕೇಟ್ ಐಟಂ ಸಂಖ್ಯೆ : 13

**ವಿಷಯ:–** ದಿನಾಂಕ:12–09–2017 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:– **ಗ್ರಂಥಾಲಯ ಸಲಹಾ ಸಮಿತಿ ಸಭೆಯ ಹದಿನಾಲ್ಕು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

# ಸಿಂಡಿಕೇಟ್ ಐಟಂ ಸಂಖ್ಯೆ : 14

Akkamahadevi Women's University, Vijayapura has entered into Memorandum of Understanding (MOU) on 28-09-2017 in the presence of His Excellency the Chancellor of the Universities at Raj Bhavan, Bengaluru with National Education Foundation (NEF) a non-profit leader head quartered at Washington DC is claiming to be one of the largest in the World engaged in bridging the employability, digital and academic divides by providing high quality affordable 21$^{st}$ century online education with total solution model with blended learning in education and technology and awarding certificate through State University of New York, for each of the successful students of the University and its affiliated colleges in the programmes mentioned in MOU.

The establishment of NEF Skill Development Centre of International Standard at AWU is also one of the requisites mentioned in the MOU. Hence the MOU and establishment of Skill Development Centre is placed before Syndicate for its perusal and approval.

ನಿರ್ಣಯ:– National Education Foundation (NEF) a non-profit leader head quartered at Washington **ಇವರ ಜೊತೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ಅನುಮೋದಿಸಲಾಯಿತು.**

# ಸಿಂಡಿಕೇಟ್ ಐಟಂ ಸಂಖ್ಯೆ : 15

**ವಿಷಯ:** ವಿಜ್ಞಾನ ವಿಭಾಗದಲ್ಲಿ ಟ್ಯೂಟರ್‌ಗಳನ್ನು ನೇಮಕ ಮಾಡಿಕೊಳ್ಳಲು ಬಿಓಎ(BOA) ರಚಿಸಲು, ವಿಷಯ ತಜ್ಞರ ಪಟ್ಟಿಯನ್ನು ತಯಾರಿಸಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ವಿಜ್ಞಾನ ವಿಭಾಗದಲ್ಲಿ ಟ್ಯೂಟರ್‌ಗಳನ್ನು ನೇಮಕ ಮಾಡಿಕೊಳ್ಳಲು ತಯಾರಿಸಿದ, ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ : 16

**ವಿಷಯ:**ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಕನ್ವೆನ್ಷನ್ ಹಾಲ್ ಎರಡನೇ ಹಂತದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಕುರಿತು ದಿನಾಂಕ:8–10–2017 ರಂದು ಜರುಗಿದ ಸಭೆ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಸುದೀರ್ಘ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.**

1. **ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡಲಿರುವ ರೂ.ಎಂಟು ಕೋಟಿ(8,00,000/–) ಮೊತ್ತದಲ್ಲಿ ಸ್ವತಂತ್ರ ಕಟ್ಟಡವನ್ನು ನಿರ್ಮಿಸಲು ಒಪ್ಪಿಗೆ ನೀಡಲಾಯಿತು.**
2. **ಡಾ.ಬಿ.ಆರ್.ಅಂಬೇಡ್ಕರ್ ಕನ್ವೆನ್ಷನ್ ಹಾಲ್ ಕುರಿತು ಸಮಿತಿ(Technical Committee) ನೀಡಲಿರುವ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ : 17

**ವಿಷಯ:–** ದಿನಾಂಕ: 14–9–2017 ರಂದು ಜರುಗಿದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಪ್ರಸಾರಾಂಗ ಸಲಹಾ ಸಮಿತಿ ಸಭೆಯ ಏಳು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ : 18

**ವಿಷಯ:–** ದಿನಾಂಕ:7–10–2017 ರಂದು ಜರುಗಿದ ಹಣಕಾಸು ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಹಣಕಾಸು ಸಲಹಾ ಸಮಿತಿ ಸಭೆಯ ಹನ್ನೆರಡು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು.**

## ಸಿಂಡಿಕೇಟ್ ಪುರವಣಿ ಸಂಖ್ಯೆ : 01

**ವಿಷಯ:–** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2017–18ನೇ ಶೈಕ್ಷಣಿಕ ಸಾಲಿನ ಎಂ.ಫಿಲ್ ಮತ್ತು ಪಿಎಚ್.ಡಿ ಪ್ರವೇಶಕ್ಕಾಗಿ ಪ್ರತಿ ವರ್ಷದಂತೆ ಈ ವರ್ಷವುಕೂಡ ಶೇ10% ಶುಲ್ಕವನ್ನು ಹೆಚ್ಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

**ವಿಷಯ:** ಆಡಳಿತ ಮಂಡಳಿ ಬದಲಾವಣೆ ಹಾಗೂ ವಿದ್ಯಾಸಂಸ್ಥೆಯ ಹೆಸರು ಬದಲಾವಣೆ ಮಾಡಲು ತಮ್ಮ ಪೂರ್ವಾನುಮತಿ ಪಡೆಯುವ ಕುರಿತು.

**ಉಲ್ಲೇಖ:** 1) ಭಗವಾನ ಶ್ರೀ ಸತ್ಯಸಾಯಿ ಎಜ್ಯುಕೇಶನ್ ಸೊಸೈಟಿ ಇವರ ಪತ್ರ ಸಂಖ್ಯೆ: 36/2017 ದಿನಾಂಕ:18–09–2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ **ಧಾರವಾಡದ ಶ್ರೀ ಸತ್ಯಸಾಯಿ ಶಿಕ್ಷಣ ಸಂಸ್ಥೆ** ಇಂದ **ಶ್ರೀ ಸತ್ಯಸಾಯಿ ಎಜುಕೇಶನಲ್ ಟ್ರಸ್ಟ್‌**ಗೆ ವರ್ಗಾವಣೆ ಮಾಡಲು ಹಾಗೂ **ವಿದ್ಯಾಸಂಸ್ಥೆಯ ಹೆಸರು: ಶ್ರೀ ಸತ್ಯಸಾಯಿ ಮಹಿಳಾ ಗೃಹವಿಜ್ಞಾನ ಮಹಾವಿದ್ಯಾಲಯ,ಧಾರವಾಡ ಇಂದ ಶ್ರೀ ಸತ್ಯಸಾಯಿ ಮಹಿಳಾ ಮಹಾವಿದ್ಯಾಲಯ, ಧಾರವಾಡ** ಎಂದು ಹೆಸರು ಬದಲಾವಣೆ ಮಾಡಲು ಭಗವಾನ ಶ್ರೀ ಸತ್ಯಸಾಯಿ ಎಜ್ಯುಕೇಶನ್ ಸೊಸೈಟಿಯ ಗೌ ಕಾರ್ಯದರ್ಶಿಗಳು ವಿನಂತಿಸಿರುತ್ತಾರೆ. ಹಾಗೇ ಕಾಲೇಜಿನ ಆಡಳಿತ ಮಂಡಳಿ ಬದಲಾವಣೆ ಹಾಗೂ ವಿದ್ಯಾಸಂಸ್ಥೆಯ ಹೆಸರು ಬದಲಾವಣೆ ಮಾಡಬೇಕಾದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59(5) ರನ್ವಯ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

**ವಿಷಯ:** ಕಸ್ಟೋಡಿಯನ್/ಮೌಲ್ಯಮಾಪಕರುಗಳ ಮೌಲ್ಯಮಾಪನ ಮಾಡಲು ದಿನಭತ್ಯೆ ನಿಗದಿಪಡಿಸುವ ಕುರಿತು.

**ಉಲ್ಲೇಖ:** ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕಾಲೇಜು, ಶಿಕ್ಷಕರ ಸಂಘ ಇವರ ಪತ್ರ ದಿನಾಂಕ:1–9–2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:7–1–2015 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಸ್ನಾತಕ, ಸ್ನಾತಕೋತ್ತರ ಹಾಗೂ ಬಿಎಡ್ ಲಿಖಿತ ಉತ್ತರ ಪತ್ರಿಕೆಗಳನ್ನು ದಿನಕ್ಕೆ 45ರಂತೆ ಕಸ್ಟೋಡಿಯನ್/ಮೌಲ್ಯಮಾಪಕರುಗಳ ಮೌಲ್ಯಮಾಪನ ಮಾಡಲು ಸ್ಥಳಿಯರಿಗೆ ದಿನಭತ್ಯೆ ರೂ.800/–ಗಳು ಹಾಗೂ ಹೊರಗಿನವರಿಗೆ ರೂ.1,000/–ಗಳ ದಿನಭತ್ಯೆ ನಿಗದಿಪಡಿಸಿ ದಿನಾಂಕ:11–2–2015ರಂದು ಆದೇಶ ಹೊರಡಿಸಲಾಗಿತ್ತು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಕಾಲೇಜು ಶಿಕ್ಷಕರ ಸಂಘ, ವಿಜಯಪುರ ಇವರು ವಿನಂತಿಸಿದಂತೆ ಸ್ನಾತಕ, ಸ್ನಾತಕೋತ್ತರ ಹಾಗೂ ಬಿಎಡ್ ಲಿಖಿತ ಉತ್ತರ ಪತ್ರಿಕೆಗಳನ್ನು ದಿನಕ್ಕೆ 45ಇದ್ದ ಉತ್ತರ ಪತ್ರಿಕೆಗಳನ್ನು ಕಡಿಮೆ ಮಾಡಿ ದಿನಕ್ಕೆ 35ರಂತೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ:15–6–2015ರಂದು ಆದೇಶ ಹೊರಡಿಸಲಾಗಿತ್ತು. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಕಾಲೇಜು ಶಿಕ್ಷಕರ ಸಂಘ, ವಿಜಯಪುರ ಇವರು ಉಲ್ಲೇಖಿತ ಪತ್ರದಲ್ಲಿ ದಿಭತ್ಯೆಯನ್ನು ಹೆಚ್ಚಿಸಲು ವಿನಂತಿಸಿರುತ್ತಾರೆ. ಆದರೆ ದಿನಭತ್ಯೆ ಹೆಚ್ಚಿಸಿ ಕೇವಲ ಒಂದು ವರ್ಷ ವಾಗಿರುತ್ತದೆ. ಹಾಗೂ ದಿನಭತ್ಯೆ ಹೆಚ್ಚಿಸುವ ಕುರಿತು ಮುಂದಿನ ದಿನಗಳಲ್ಲಿ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು. ಆದ್ದರಿಂದ ಜಾರಿಯಲ್ಲಿರುವ ದಿನಕ್ಕೆ ಸ್ಥಳಿಯರಿಗೆ ದಿನಭತ್ಯೆ ರೂ.800/–ಗಳು ಹಾಗೂ ಹೊರಗಿನವರಿಗೆ ರೂ.1,000/–ಗಳ ದಿನಭತ್ಯೆ ಮುಂದುವರೆಸಲು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:– ಸದ್ಯ ಜಾರಿಯಲ್ಲಿರುವ ಕ್ರಮ ಮುಂದುವರೆಸಲು ತೀರ್ಮಾನಿಸಲಾಯಿತು. (ದಿನಕ್ಕೆ ಸ್ಥಳಿಯರಿಗೆ ರೂ.800/–ಗಳ ದಿನಭತ್ಯೆ ಹಾಗೂ ಹೊರಗಿನವರಿಗೆ ರೂ.1,000/–ಗಳ ದಿನಭತ್ಯೆ).**

**ಇತರೆ ವಿಷಯಗಳು:**

1.ವಿಷಯ:- ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 'ಕೌಶಲ್ಯ' ತಂತ್ರಜ್ಞಾನ ಪಾರ್ಕ್ ಹಾಗೂ ವಿಶ್ವವಿದ್ಯಾನಿಲಯದ ಉಡುತಡಿ ಕೇಂದ್ರದ ವಿಸ್ತರಣಾ ಕೇಂದ್ರಕ್ಕೆ ಪರಿನಿಯಮಾವಳಿಗಳನ್ನು ರಚಿಸಲು ಹಾಗೂ 'ಕೌಶಲ್ಯ' ತಂತ್ರಜ್ಞಾನ ಪಾರ್ಕ್, ಜ್ಞಾನಶಕ್ತಿ ಕ್ಯಾಂಪಸ್, ವಿಜಯಪುರ ಇಲ್ಲಿ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಒಬ್ಬ ಸಿಬ್ಬಂದಿಯನ್ನು ಅತಿಥಿ ಉಪನ್ಯಾಸಕರ ನೆಲೆಯಲ್ಲಿ ನೇಮಕಾತಿ ಮಾಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮತಿಗಾಗಿ ಮಂಡಿಸಿದೆ.

**ನಿರ್ಣಯ:- ಅನುಮತಿಸಲಾಯಿತು.**

**ಕುಲಸಚಿವರಾದ ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ